# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

No. ED/KEA/PGNEET (M)/CR-13/2025 Date: 29-01-2026

## ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಿಗೆ 3ನೇ ಸುತ್ತಿನ (ಮಾಪ್-ಅಪ್) ಆನ್‌ಲೈನ್ ಸೀಟು ಹಂಚಿಕೆ-2025

2025ನೇ ಸಾಲಿನ ಪಿಜಿವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ Non-inservice ಅಭ್ಯರ್ಥಿಗಳಿಗೆ 3ನೇ (ಮಾಪ್‌ಅಪ್) ಸುತ್ತಿನ ಸೀಟು ಹಂಚಿಕೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುವುದು.

### 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ:

1. 3ನೇ ಸುತ್ತಿನ ಸೀಟು ಹಂಚಿಕೆಗೆ ದಿನಾಂಕ 20-12-2025 ರ ಪ್ರಕಟಣೆಯಲ್ಲಿ ಪರಿಷ್ಕರಿಸಿದ ಕೌನ್ಸಿಲಿಂಗ್ ಷರತ್ತುಗಳು / ಮಾರ್ಗಸೂಚಿಗಳನ್ವಯ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸಿ ಕಾಲೇಜಿಗೆ ಕಡ್ಡಾಯವಾಗಿ ಕಾಲೇಜಿನಲ್ಲಿ ಪ್ರವೇಶ ಪಡೆದ (ಕ್ಲಿನಿಕಲ್ / ಪ್ರೀ ಮತ್ತು ಪ್ಯಾರಾ ಕ್ಲಿನಿಕಲ್) ಅಭ್ಯರ್ಥಿಗಳನ್ನು 3ನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ (Upgradataion) ಇತರೆ ಅರ್ಹ ಅಭ್ಯರ್ಥಿಗಳೊಂದಿಗೆ ಭಾಗವಹಿಸಲು ಅನುಮತಿಸಲಾಗುವುದು.
2. NBEMS, New Delhi ಇವರ 13-01-2026 ಸೂಚನೆಯಂತೆ ಪ್ರಾಧಿಕಾರವು 17-01-2026 ರಂದು ಹೊರಡಿಸಿದ ಪ್ರಕಟಣೆಯಂತೆ ಪ್ರಾಧಿಕಾರದಲ್ಲಿ ಹೊಸದಾಗಿ ನೋಂದಣಿ ಮಾಡಿ, ದಾಖಲೆಗಳ ಪರಿಶೀಲನೆ ಪೂರ್ಣಗೊಳಿಸಿ ಮೂಲ ದಾಖಲೆಗಳನ್ನು ಪ್ರಾಧಿಕಾರದಲ್ಲಿ ಸಲ್ಲಿಸಿರುವವರು ಹಾಗೂ;
3. 17-01-2026 ರ ಪ್ರಕಟಣೆಯನ್ವಯ ಮೂಲ ದಾಖಲೆಗಳನ್ನು ಪ್ರಾಧಿಕಾರದಲ್ಲಿ ಸಲ್ಲಿಸಿರುವವರು 3ನೇ ಸುತ್ತಿನಲ್ಲಿ ಭಾಗವಹಿಸಬಹುದು.

### 3ನೇ ಸುತ್ತಿನಲ್ಲಿ ಭಾಗವಹಿಸಲು ಅನರ್ಹತೆ:

1. ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ಸಂಸ್ಥೆ / ಬೋರ್ಡ್‌ಗಳಿಂದ ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳಿಗೆ ಹಂಚಿಕೆ ಪಡೆದು ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಲ್ಲಿ ಅಥವಾ ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ರಾಜ್ಯ / ಸಂಸ್ಥೆ-ಬೋರ್ಡ್‌ಗಳಿಂದ 3ನೇ (ಮಾಪ್ ಅಪ್) ಸುತ್ತಿನಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ. (GOI ನಿಂದ ನಿಗದಿಪಡಿಸುವ ಷರತ್ತುಗಳಿಗೆ ಒಳಪಟ್ಟಿದೆ)
2. ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದು ಪಡಿಸಿಕೊಂಡಿರುವ ಅಭ್ಯರ್ಥಿಗಳು 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ; ಹಾಗೂ
3. ಎರಡನೇ ಸುತ್ತಿನಲ್ಲಿ ತಾತ್ಕಲಿಕವಾಗಿ / ಅಂತಿಮವಾಗಿ ಹಂಚಿಕೆಯಾದ ನಂತರ ಸೀಟು ರದ್ದುಗೊಂಡಿಸಿರುವವರು ಅಥವಾ ಎರಡನೇ ಸುತ್ತಿನಲ್ಲಿ ಅಂತಿಮವಾಗಿ ಹಂಚಿಕೆಯಾದ ಸೀಟಿಗೆ ಶುಲ್ಕ ಪಾವತಿಸದೇ ಇರುವವರು 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.

### ಈ ಕೆಳಗಿನ ಸೂಚನೆಗಳನ್ನು ತಪ್ಪದೆ ಓದಿ.

ಮಾನ್ಯ ನ್ಯಾಯಾಲಯಗಳ / ಸರ್ಕಾರ / ಸಕ್ಷಮ ಪ್ರಾಧಿಕಾರದ ನಿರ್ದೇಶನಗಳ ಅನ್ವಯ ಸೇವಾನಿರತ ಅಭ್ಯರ್ಥಿಗಳಿಗೆ ಎರಡು ಸುತ್ತಿನ ಸೀಟು ಹಂಚಿಕೆಯನ್ನು ಪೂರ್ಣಗೊಳಿಸಿ ನಂತರ ಭರ್ತಿಯಾಗದೆ ಉಳಿದ ಸೀಟುಗಳನ್ನು ರೋಸ್ಟರ್ ನಿಯಮಾವಳಿಗಳ ಅನುಸಾರ ವೈದ್ಯಕೀಯ ಶಿಕ್ಷಣ ಇಲಾಖೆಯು ವರ್ಗೀಕರಣ ಮಾಡಿ ನೀಡಿದ ಸೀಟುಗಳನ್ನು ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿಯೇ Non-inservice ಅರ್ಹ ಅಭ್ಯರ್ಥಿಗಳಿಗ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗಿದೆ.

ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ವಿವರಗಳನ್ನು ಹಾಗು ಎರಡನೇ ಸುತ್ತಿನ ನಂತರ ಅಭ್ಯರ್ಥಿಗಳು ರದ್ದು ಪಡಿಸಿಕೊಂಡಿರುವ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ 17-01-2026 ರಂದು ಪ್ರಕಟಿಸಲಾಗಿದೆ. ಯಾವುದಾದರು ಹೊಸದಾಗಿ ಸೇರಲ್ಪಡುವ ಮತ್ತು ಮಾಪ್ ಅಪ್ ಸುತ್ತಿಗೂ ಮೊದಲು ರದ್ದು ಪಡಿಸಿಕೊಳ್ಳುವ ಮತ್ತು ಖಾಲಿ ಇದೆ ಎಂದು ಗುರುತಿಸಲ್ಪಡುವ ಪಿಜಿ ವೈದ್ಯಕೀಯ ಸೀಟುಗಳನ್ನೂ ಸಹ 3ನೇ ಸುತ್ತಿಗೆ ಪರಿಗಣಿಸಲಾಗುವುದು ಹಾಗು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. Updated ಮಾಹಿತಿಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿಗೆ ಭೇಟಿ ನೀಡುತ್ತಿರಲು ಸೂಚಿಸಿದೆ.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

## OPTION ENTRY

a. ಪ್ರಾಧಿಕಾರದಿಂದ ಹಂಚಿಕೆಯಾದ ಸೀಟುಗಳಿಗೆ ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಸೀಟುಗಳಲ್ಲಿ ಆಸಕ್ತಿ ಇದ್ದರೆ ಮಾತ್ರ ಭಾಗವಹಿಸಲು ಸೂಚಿಸಿದೆ (Upgradataion). ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟು ತನ್ನಷ್ಟಕ್ಕೆ ರದ್ದುಗೊಳ್ಳುತ್ತದೆ ಮತ್ತು ಇದೇ ಸುತ್ತಿನಲ್ಲಿ ಇತರೆ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಹಂಚಿಕೆಗೆ ಒಳಪಡುತ್ತದೆ, ಯಾವುದೇ ಕಾರಣಕ್ಕೂ ಆ ಸೀಟುಗಳನ್ನು ಹಿಂಪಡೆಯಲು ಸಾಧ್ಯವಾಗುವುದಿಲ್ಲ ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು.

b. ಮೂಲ ದಾಖಲೆಗಳನ್ನು ಸಲ್ಲಿಸುವ ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ **OPTIONS** ಗಳನ್ನು ದಾಖಲಿಸಲು ಅನುವು ಮಾಡಿಕೊಡಲಾಗುವುದು. ಎಲ್ಲಾ ಅಭ್ಯರ್ಥಿಗಳು ಹೊಸದಾಗಿ **OPTIONS** ಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ **OPTIONS** ಗಳನ್ನು ಪರಿಗಣಿಸುವುದಿಲ್ಲ.

c. ಮೆರಿಟ್ ಹಾಗು ಅಭ್ಯರ್ಥಿಗಳು ದಾಖಲಿಸುವ **OPTIONS** ಗಳ ಆಧಾರದ ಮೇಲೆ ಸೀಟು ಹಂಚಿಕೆಯಾಗುವುದರಿಂದ, ಅಭ್ಯರ್ಥಿಗಳು ಕಾಲೇಜಿಗೆ ಸೇರಲು ಆಸಕ್ತಿ ಇರುವ **OPTIONS** ಗಳನ್ನು ಮಾತ್ರ ಆದ್ಯತಾ ಕ್ರಮದಲ್ಲಿ ದಾಖಲಿಸಲು ಸೂಚಿಸಲಾಗಿದೆ.

d. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಲಭ್ಯತೆ ಇಲ್ಲದಿದ್ದರೂ ಸಹ ಸೇರಬಯಸುವ ಎಲ್ಲಾ ಸೀಟುಗಳಿಗೆ ಅಭ್ಯರ್ಥಿಗಳು **OPTIONS** ಗಳನ್ನು ದಾಖಲಿಸಲು ಸೂಚಿಸಲಾಗಿದೆ, ಏಕೆಂದರೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಭಾಗವಹಿಸುತ್ತಿರುವದರಿಂದ ಬಿಟ್ಟುಕೊಡಬಹುದಾದ ಸೀಟುಗಳು, ಹೊಸದಾಗಿ ಸೇರಲ್ಪಡುವ ಸೀಟುಗಳು (ಯಾವುದಾದರು ಇದ್ದಲ್ಲಿ), 3ನೇ ಸುತ್ತಿಗೂ ಮೊದಲು ರದ್ದು ಪಡಿಸಿಕೊಳ್ಳುವ ಮತ್ತು ಖಾಲಿ ಇದೆ ಎಂದು ಗುರತಿಸಲ್ಪಡುವ ಪಿಜಿ ವೈದ್ಯಕೀಯ ಸೀಟುಗಳನ್ನೂ ಸಹ 3ನೇ ಸುತ್ತಿಗೆ ಪರಿಗಣಿಸಲಾಗುತ್ತದೆ.

e. ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ವಿವಿಧ ವರ್ಗಗಳಲ್ಲಿನ ಸೀಟುಗಳ ಶುಲ್ಕವನ್ನು ಕಡ್ಡಾಯವಾಗಿ ತಿಳಿದುಕೊಂಡು **OPTIONS** ಗಳನ್ನು ದಾಖಲಿಸಬಹುದು / ಭಾಗವಹಿಸಬಹುದಾಗಿದೆ.

f. 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಅಭ್ಯರ್ಥಿಯು ಕಾಲೇಜಿಗೆ ಪ್ರವೇಶ ಪಡೆಯಲು ವಿಫಲನಾದಲ್ಲಿ ಅಭ್ಯರ್ಥಿಯ ವಿರುದ್ಧ ಕ್ರಮವಹಿಸಲಾಗುವುದು. ಅಖಿಲ ಭಾರತ ಕೌನ್ಸಿಲಿಂಗ್ ಸೇರಿದಂತೆ ಮುಂದಿನ ವರ್ಷಗಳ ಪಿಜಿ ವೈದ್ಯಕೀಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.

ಗಮನಿಸಿ:

1. 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಅಭ್ಯರ್ಥಿಗಳ ಕೋರಿಕೆ ಮೇರೆಗೆ ಮೂಲ ದಾಖಲೆಗಳನ್ನು ಹಿಂದಿರುಗಿಸಲಾಗುವುದು, ಮೂಲ ದಾಖಲೆಗಳನ್ನು ಪಡೆಯಲು ಅಭ್ಯರ್ಥಿಯು ವೆರಿಫಿಕೇಶನ್ ಸ್ಲಿಪ್ ಮತ್ತು ಗುರುತಿನ ಚೀಟಿಯನ್ನು ಹಾಜರು ಪಡಿಸಬೇಕು ಮತ್ತು ಅಭ್ಯರ್ಥಿಯೇ ಖುದ್ದಾಗಿ ಪಡೆಯಬೇಕು.
2. *ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಸೀಟು ರದ್ದು ಪಡಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು ನಿಯಮಾನುಸಾರ ದಂಡವನ್ನು ಪಾವತಿಸಬೇಕು. ದಂಡ ಪಾವತಿಯ ನಂತರವೇ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳನ್ನು ಹಿಂದಿರುಗಿಸಲಾಗುವುದು;*
3. ಆದ್ದರಿಂದ ಅಭ್ಯರ್ಥಿಗಳು ಎಚ್ಚರದಿಂದ **OPTIONS** ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಸಲಹೆ ನೀಡಲಾಗಿದೆ.

**3ನೇ ಸುತ್ತಿನ ಸೀಟು ಹಂಚಿಕೆಗೆ** ಹೊಸದಾಗಿ ಇಚ್ಛೆ / ಆಯ್ಕೆಗಳನ್ನು (Option Entry) 02-02-2026 ರಿಂದ 05-02-2026 ರ ಮ.1.00 ರವರೆಗೆ ದಾಖಲಿಸಬಹುದು, ಹಾಗೂ ವಿವರವಾದ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು